ತೀರ ಅಮೂರ್ತವಾದ ಒಂದು ತಳಮಳ. "ಅಣ್ಣ ಯಾಕೆ ಹೀಗಾಗಿದ್ದಾನೆ?" ಅಂತ ಅನಿಸಿದ್ದು ಅದೆಷ್ಟನೆಯ ಸಾರಿಯೋ. ನನಗೊಬ್ಬಳಿಗಷ್ಟೆ ತಟ್ಟಿದಂತಿರುವ ಈ ವಿಷಾದ ವರ್ಷದ ಒಂದೊಂದು ಭೇಟಿಯಲ್ಲೂ ತನ್ನ ತೀವ್ರತೆಯನ್ನು ಏರಿಸುತ್ತಿರುವುದು ತಡೆಯದಂತಾಗಿದೆ. ಅಲ್ಲಿ ಹೋಗದಿರುವುದು ನನಗೆ ಸಾಧ್ಯವಿಲ್ಲ. ತವರು ಅನ್ನುವ ತತ್ಪರತೆಯಿಂದ ಕಳಚಿ ನಿಂತರೆ ಆಮೇಲೆ ಅಯಾಚಿತವಾಗಿ ಕವಿದು ಕೂಡುವ ಅಗಣಿತ ತತ್ವಾರಗಳನ್ನು ನಿವಾರಿಸುವುದು ಸುಲಭವೆ? ತಾಯಿತಂದೆಯಿದ್ದಾಗ ಮೋಹ ಪಾಶಗಳೆಲ್ಲ ತಮಗೆ ತಾವೇ ಸುತ್ತಿಕೊಂಡು ತಮ್ಮೊಳಗಿನ ಬಿಗಿಯನ್ನು ಕಾದಿರುತ್ತವೆ. ಇನ್ನೂ ಎಲ್ಲಾ ಹಾಗೇ ಇರಬೇಕು ಎಂದು ಬಯಸುವುದು ತಪ್ಪೇನೋ – ನನ್ನವರೂ ಹಾಗನ್ನುತ್ತಾರೆ. ನನಗೆ ಮಾತ್ರ ನೆಮ್ಮದಿಯಿಲ್ಲ. ಹುಟ್ಟಿ ಬೆಳೆದ ಮಣ್ಣಿನೆಡೆಗೆ ಉತ್ಕಟವಾದ ಸೆಳೆತ. ಆಡಿ, ಓಡಿ, ಬೆಳೆದ ಪರಿಸರದಲ್ಲಿ ಹಿಡಿದು ಎಳೆಯುವ ಮೋಹ. ಪ್ರತಿಸಲ ಬಂದಾಗಲೂ ಹಿಂದಿನ ಹಲವು ವರ್ಷಗಳೊಂದಿಗೆ ಇಂದಿನ ದಿನಗಳನ್ನು ಸೇರಿಸಿಕೊಂಡು ಸಮನ್ವಯಗೊಳಿಸುವ ತವಕ. ಸಂಬಂಧಗಳ ಸ್ವಕೀಯ ಸಂಭವಗಳಲ್ಲಿ ಸಣ್ಣದೊಂದು ಬಿರುಕು ಕಂಡರೂ ತಡೆಯಲಾರದ ತಲ್ಲಣ. ಬದುಕಿನಲ್ಲಿ ಇನ್ನೇನೂ ಉಳಿದಿಲ್ಲವೇನೋ ಅಂತನಿಸುವ ಕಳವಳ. ಮದುವೆ, ಮಕ್ಕಳು, ಉದ್ಯೋಗ ಎಲ್ಲ ತಲ್ಲೀನತೆಗಳೊಂದಿಗೆ ಐದು ದಶಕಗಳನ್ನು ದಾಟಿ 'ಸೆಕೆಂಡ್ ಹಾಫ್'ನ ಮೇಲೆ ಬಂದಾಯ್ತು. ನನಗೇನಾಗಿದೆ? ಅತ್ತಿಗೆಯ ನಿರ್ಲಿಪ್ತ ನಿಲುವನ್ನು ಬದಿಗಿರಿಸಿ ಉಲ್ಲಾಸವೇ ಉಸಿರಾಗಿದ್ದ, ರಾಶಿ ಸಂತಸಗಳನ್ನು ಸ್ವಂತವಾಗಿ ಸಂಪಾದಿಸಿ ಹಂಚಿ ಹಗುರಾಗಿದ್ದ ಅಣ್ಣನೇಕೆ ಹೀಗಾದ?

ಒಂದು ಸುದೀರ್ಘ ಮಧ್ಯಂತರದ ನಂತರ ಅಪರೂಪವಾಗಿ ಅಣ್ಣನ ಫೋನ್ ಕರೆದಾಗ ಸುಮ್ಮನೆ ಸಂಭ್ರಮವೆನಿಸಿತು.

"ಮಾಲವಿಕಾ, ಕೆನಡಾದಿಂದ ಮಗ–ಸೊಸೆ ಬಂದಿದ್ದಾರೆ. ನೀನೂ ಬರ್ತೀಯ? ಬಿಡುವಿದ್ದರೆ ಬಂದು ಹೋಗು'' ಅಂತ ಚುಟುಕಾದ ಆಹ್ವಾನ. ಏನು ಮಾಡಲಿ? ಇದಕ್ಕೂ ಹೆಚ್ಚು ಇನ್ನೇನು ನಿರೀಕ್ಷಿಸಬಹುದು? ಮಕ್ಕಳು ರೆಕ್ಕೆ ಬಲಿತು ಹಾರಿದ ಮೇಲೆ ಅಣ್ಣ ಅಂತರ್ಮುಖಿಯಾಗಿದ್ದಾನೆ. ಅವರ ಏಳಿಗೆಯಲ್ಲಿ ವ್ಯಕ್ತವಾಗುವ ಸಂತೃಪ್ತಿ, ಸ್ವಕೀಯಗಳು ಒಡಹುಟ್ಟಿದವರ ಒಡನಾಟದಲ್ಲಿ ಕಾಣುವಂತಿಲ್ಲ. ಇದು ಇಂದಿನ ಲೋಕಾಚಾರವೇ ಇರಬಹುದು. ಆದರೂ ನಿರಂತರವಾದುದೊಂದು ಒಳಗುದಿ. ರಕ್ತಸಂಬಂಧವನ್ನು ಎಂದೂ ಅಲ್ಲಗಳೆಯುವಂತಿಲ್ಲ. ಇತರ ಬಂಧಗಳೆಲ್ಲ ಒಂದೊಂದಾಗಿ ಸಡಿಲಾಗುತ್ತಿರುವಂತೆ, ಸಂಪರ್ಕ ಸಹವಾಸಗಳೂ ಅಪರೂಪವಾಗಿ ಸಹಕಾರ – ಸಮನ್ವಯಗಳು ನೆಪಮಾತ್ರವಾಗಿ ನಿಂತಿವೆ. ಹೀಗೇಕಾಯ್ತು?

ರೈಲಿನ ಕಿಟಕಿಯ ಫ್ರೇಮಿನಿಂದ ಕಂಡುಬರುವ ದೃಶ್ಯಗಳು ವೇಗವಾಗಿ ಸರಿಯುತ್ತ ವೃತ್ತಾಕಾರ ಪಡೆದು ಸುತ್ತುತ್ತಿವೆ. ನೆನಪುಗಳೂ ಹೀಗೇ ಅಲ್ಲವೇ? ಹಿಂದು ಹಿಂದಕ್ಕೆ ಚಲಿಸಿ ವರ್ತುಲವಾಗುತ್ತವೆ. ಬಾಲ್ಯದಲ್ಲಿ ಪರಮಾಪ್ತವಾಗಿ, ನಿತ್ಯನೂತನವಾಗಿ ಪರಿಣಮಿಸಿದ್ದ ಪರಿಸರ ಇದೀಗ ಪರಕೀಯ ಪರದೆಯಾಚೆ ಕಾಣಿಸುತ್ತಿದೆ. ಅಪ್ಪನ ಕೈಹಿಡಿದು ನೆಲದ ನಲ್ಮೆಯಲ್ಲಿ ನಲಿನಲಿದು ನಡೆದಾಡಿದ ತೋಟ, ಗದ್ದೆ, ಬಯಲುಗಳೆಲ್ಲ ನಿಸ್ತೇಜವಾಗಿ ನಿಂತಿವೆ. ಅಣ್ಣನ ಗೆಳೆಯರ ಬಳಗದಲ್ಲಿ ಸೇರಿಕೊಂಡು ಗುಡ್ಡಗಳಲ್ಲೆಲ್ಲ ಅಲೆದಾಡಿ, ದಣಿದರೂ ಸೋಲೊಪ್ಪದೆ, ಮಡಿಲ ತುಂಬಾ ತುಂಬಿ ತರುತ್ತಿದ್ದ ಹಣ್ಣುಗಳ ಹೆಸರುಗಳನ್ನೆ ಮರೆತೆನಲ್ಲ – ಅಣ್ಣನಂತೂ ಆ ಎಲ್ಲ ದಿನಗಳನ್ನೇ ಮರೆತಂತಿದೆ.

ಅಮ್ಮನಿಲ್ಲದ ತವರು, ಅಯಾಚಿತವಾಗಿ ಒಂದು ತಾರತಮ್ಯದ ಭಾವವನ್ನು ತನಗೆ ತಾನೇ ಹೊದ್ದು ಕೂತಿರುತ್ತದೆ. ಹೆಬ್ಬಾಗಿಲಲ್ಲೇ ಎದುರಾಗುವ ತಬ್ಬಲಿತನ ಉದ್ದಕ್ಕೂ ಅವಚಿ ಹಿಡಿದು ಉಳಿಯುತ್ತದೆ.